



**ನಮ್ಮ ಅರಸು**
(ಒಡನಾಡಿಗಳು ಕಂಡಂತೆ)
ಲೇ: ಬಸವರಾಜು ಮೇಗಲಕೇರಿ
ಪು: 584 ಬೆ: ರೂ. 600
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ ಅಂಚೆ, ವಯಾ ಎಮ್ಮಿಗನೂರ, ಬಳ್ಳಾರಿ – 583 113
ದೂರವಾಣಿ: 88800 87235

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

ಇಂಥ ಸಂದರ್ಭಗಳಲ್ಲಿ ಸಿಕ್ಕುವ ಮಾಹಿತಿಗಳಲ್ಲಿ, ವ್ಯಾಖ್ಯಾನಗಳಲ್ಲಿ ಇರಬಹುದಾದ ಸತ್ಯವನ್ನು, ದೇಶಾವರಿ ಉಪಕತೆಗಳ ನಡುವೆ ವಾಸ್ತವವನ್ನು ಹೆಕ್ಕಿ ತೆಗೆಯಲು ಲೇಖಕನೊಬ್ಬ ಸೆಣಸಾಡಬೇಕಾಗುತ್ತದೆ!

ಹಲಬಗೆಯ ಸಾರ್ವಜನಿಕ ವ್ಯಕ್ತಿಗಳ ಅಭಿಪ್ರಾಯಗಳನ್ನು ದಾಖಲಿಸುವ ಲೇಖಕನೊಬ್ಬ ಎಲ್ಲಿ ನಿಂತು ಸತ್ಯವನ್ನು ನಿಷ್ಠುರವಾಗಿ ಗ್ರಹಿಸಬೇಕು ಎಂಬುದು ಸವಾಲಿನ ಕೆಲಸ. ಉದಾಹರಣೆಗೆ, ಈ ಪುಸ್ತಕದಲ್ಲಿ ಎಚ್.ಡಿ. ದೇವೇಗೌಡರು ಅರಸು ಅವರನ್ನು ಮೆಚ್ಚುವ ಪ್ರಸಂಗಗಳನ್ನು ಹೇಳುತ್ತಲೇ ತಮ್ಮ ಇಮೇಜನ್ನು ವಿಸ್ತರಿಸಿಕೊಳ್ಳಲೆತ್ನಿಸುವ 'ವ್ಯಾಖ್ಯಾನ ರಾಜಕೀಯ'ವನ್ನು ಗಮನಿಸಬಹುದು. ಈ ಥರದ ಮಾತುಗಳನ್ನು 'ಬಿಟ್ವೀನ್ ದಿ ಲೈನ್ಸ್' ಓದಿದಾಗ, ಅಂದರೆ ಈ ಮಾತುಗಳು ಬಚ್ಚಿಡುವ, ಮಾತುಗಳ ಮಧ್ಯೆ ಎಲ್ಲೋ ಹುದುಗಿರಬಹುದಾದ, ಸೂಕ್ಷ್ಮಗಳನ್ನು ಹೆಕ್ಕಿಕೊಂಡು ನೋಡಿದಾಗ ಮಾತ್ರ, ಅಷ್ಟಿಷ್ಟು ಸತ್ಯ ಕಾಣಬಹುದೇನೋ!

ಅದೇನೇ ಇದ್ದರೂ, ಹಲವು ವಲಯಗಳ ನಿರೂಪಕರು ಮಾತುಮಾತಾಡುತ್ತಿರುವಂತೆಯೇ ಬಗೆಬಗೆಯ ನಿಗೂಢ ರಾಜಕೀಯ ಸತ್ಯಗಳು ಇಲ್ಲಿ ಮೂಡುತ್ತಾ ಹೋಗುತ್ತವೆ. ಅಂಥ ಪ್ರಸಂಗವೊಂದನ್ನು ಅರಸು ಅವರ ರಾಜಕೀಯ ಕಾರ್ಯದರ್ಶಿಯಾಗಿದ್ದ ಸಚ್ಚಿದಾನಂದಸ್ವಾಮಿ ನೆನಸಿಕೊಳ್ಳುತ್ತಾರೆ: ಒಮ್ಮೆ ದೇವರಾಜ ಅರಸು ತಮ್ಮ ಮಂತ್ರಿಮಂಡಲಕ್ಕೆ ಸೇರಬೇಕಾದ ಮಂತ್ರಿಗಳ ಪಟ್ಟಿಯೊಂದನ್ನು ಇಂದಿರಾ ಗಾಂಧಿಯವರಿಗೆ ಕಳಿಸುತ್ತಾರೆ. ಆ ಪಟ್ಟಿ ಇಂದಿರಾ ಗಾಂಧಿಯವರ ರಾಜಕೀಯ ಕಾರ್ಯದರ್ಶಿ ಡಿ.ಕೆ. ಬರೂವರನ್ನು ತಲುಪುತ್ತದೆ. ಮುಂದಿನ ಕತೆಯನ್ನು ಸ್ವಾಮಿಯವರ ಮಾತಿನಲ್ಲೇ ಕೇಳಿ: 'ಡಿ.ಕೆ. ಬರೂವ ಆ ಪಟ್ಟಿಯಲ್ಲಿದ್ದ ಮೊದಲನೆಯ ಹೆಸರಾದ ಎಸ್. ಬಂಗಾರಪ್ಪನವರನ್ನು ಬಿಟ್ಟು ಮಿಕ್ಕೆಲ್ಲರನ್ನೂ ತೆಗೆದುಕೊಳ್ಳಬಹುದು' ಎಂದು ಶರಾ ಬರೆದಿದ್ದರು. 'ಬಂಗಾರಪ್ಪನವರನ್ನು ಬಿಟ್ಟಿದ್ದೇಕೆ?' ಎಂದು ಕೇಳಿದೆ. 'ಕಾಂಗ್ರೆಸ್ ಪಾರ್ಟಿ ಮತ್ತು ಅರಸು ಅವರ ಹಿತದೃಷ್ಟಿಯಿಂದ' ಎಂದರು ಬರೂವ.'

ಆದರೆ, 'ಬಂಗಾರಪ್ಪ ಮಂತ್ರಿಮಂಡಲಕ್ಕೆ ಅನಿವಾರ್ಯ ಅಗತ್ಯ' ಎಂಬ ಅರಸು ನಿಲುವನ್ನು ಸ್ವಾಮಿಯವರು ಇಂದಿರಾ ಗಾಂಧಿ ಹಾಗೂ ಬರೂವರಿಗೆ ಒತ್ತಿ